# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ-2234/2017/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001
ದಿನಾಂಕ:27-02-2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ ಸಾಯಿದತ್ತಾ ವಾಸ: ನಂ:37, 4ನೇ ಅಡ್ಡ ರಸ್ತೆ, ಅಶೋಕ ನಗರ, ಬನಶಂಕರಿ 1ನೇ ಹಂತ, ಬೆಂಗಳೂರು ಇವರು ಸಲ್ಲಿಸಿರುವ ದೂರಿನ ಮೇಲೆ ಕ್ರಮವನ್ನು ಕೈಗೊಳ್ಳುವ ಬಗ್ಗೆ

****

ಈ ದೂರನ್ನು ಶ್ರೀ ಸಾಯಿದತ್ತಾ ವಾಸ: ನಂ:37, 4ನೇ ಅಡ್ಡ ರಸ್ತೆ, ಅಶೋಕ ನಗರ, ಬನಶಂಕರಿ 1ನೇ ಹಂತ, ಬೆಂಗಳೂರು **(ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ)** ಇವರು (1) ಶ್ರೀ ಮಾಯಣ್ಣ ಗೌಡ, ಆಯುಕ್ತರು, ನಗರ ಸಭೆ, ರಾಮನಗರ ಮತ್ತು (2) ಶ್ರೀ.ಆನಂದ ಪಿ. ಕಳ್ಳೊಳಿಕರ್, ಆಯುಕ್ತರು, ನಗರ ಸಭೆ, ಚನ್ನಪಟ್ಟಣ, ರಾಮನಗರ ಜಿಲ್ಲೆ **(ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ)** ಇವರ ವಿರುದ್ದ ಸಲ್ಲಿಸಿದ್ದಾರೆ.

2. **ದೂರಿನ ಸಂಕ್ಷಿಪ್ತ ವಿವರ:**

ರಾಮನಗರ ಮತ್ತು ಚನ್ನಪಟ್ಟಣ ನಗರ ಸಭಾ ವ್ಯಾಪ್ತಿಯಲ್ಲಿ ಫ್ಲೆಕ್ಸ್, ಹೋರ್ಡಿಂಗ್ಸ್ ಮತ್ತು ಬ್ಯಾನರ್‌ಗಳ ಹಾವಳಿ ವಿಪರಿತವಾಗಿದೆ. ಇದರಿಂದ ನಗರಗಳ ಸೌಂದರ್ಯಕ್ಕೆ ದಕ್ಕೆವುಂಟಾಗಿದೆ. ನಗರ ಸಭೆಯ ಜಾಹೀರಾತು ಬೈಲಾಗಳಿಗೆ ವಿರುದ್ಧವಾಗಿ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿರುತ್ತದೆ. ರಾಜಕೀಯ ವ್ಯಕ್ತಿಗಳ ಮುಖಂಡರ ಹಾಗೂ ಸಂಘ-ಸಂಸ್ಥೆಗಳ, ಹುಟ್ಟಿದ ಹಬ್ಬಕ್ಕೂ ಸಹ ಫಲಕಗಳನ್ನು ಅಳವಡಿಸಲಾಗುತ್ತಿದೆ. ಯಾರು ಸಹ ನಗರ ಸಭೆಗೆ ತೆರಿಗೆಯನ್ನು ಕಟ್ಟುತ್ತಿಲ್ಲ. ಇದರಿಂದಾಗಿ ನಗರ ಸಭೆಗಳಿಗೆ ಆರ್ಥಿಕ ನಷ್ಟ ಉಂಟಾಗಿದೆ. ಎದುರುದಾರರಿಗೆ ಈ ಬಗ್ಗೆ ದೂರುಗಳನ್ನು ಸಲ್ಲಿಸಿದ್ದರೂ ಸಹ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ, ಎದುರದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ದಿನಾಂಕ: 29-8-2017 ರ ಆದೇಶದಂತೆ, ಆಯುಕ್ತರು, ನಗರ ಸಭೆ ರಾಮನಗರ ಇವರನ್ನು ದಿನಾಂಕ: 15-9-2017 ರಂದು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

4. ಆಯುಕ್ತರು, ನಗರ ಸಭೆ, ರಾಮನಗರ ಇವರು ದಿನಾಂಕ: 15-9-2017 ರಂದು ಖುದ್ದು ಹಾಜರಾಗಿ ರಾತ್ರೋರಾತ್ರಿ ಅನಧಿಕೃತವಾಗಿ ಅಳವಡಿಸಿದ ಬ್ಯಾನರ್ ಮತ್ತು ಫ್ಲೆಕ್ಸ್, ಜಾಬ್ ಚಾರ್ಟ ತೆರವು ಕಾರ್ಯಾಚರಣೆಯನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ. ಜುಲೈ ತಿಂಗಳಿನಲ್ಲಿ ಚಾಮುಂಡೇಶ್ವರಿ ಕರಗ ಇದ್ದುದ್ದರಿಂದ ಪೌರ ಕಾರ್ಮಿಕರು ಬೇರೆ ಕೆಲಸದಲ್ಲಿ ತೊಡಗಿದ್ದರು. ಸಮರೋಪಾಧಿಯಲ್ಲಿ ತೆರವು ಕಾರ್ಯಾಚರಣೆಯನ್ನು ಕೈಗೊಳ್ಳಲಾಗುತ್ತಿದೆ ಅಂತ ವರದಿಯನ್ನು ಸಲ್ಲಿಸಿದ್ದಾರೆ. ನಗರ ಸಭೆಗಳಲ್ಲಿ ಮತ್ತು ಪುರಸಭೆಗಳಲ್ಲಿ ಇದುವರೆಗೂ ಬೈಲಾಗಳು ರಚನೆ ಆಗಿಲ್ಲ. ಆದ್ದರಿಂದ, ಈ ತೊಂದರೆಗಳು ಕಾಣಿಸಿಕೊಳ್ಳುತ್ತಿವೆ ಅಂತ ತಿಳಿಸಿದ್ದಾರೆ.

5. ಫ್ಲೆಕ್ಸ್ ಮತ್ತು ಬ್ಯಾನರ್‌ಗಳ ಅಳವಡಿಕೆಗಳ ಕುರಿತಂತೆ ಯಾವುದೇ ಬೈಲಾಗಳು ಇಲ್ಲದೇ ಇದ್ದುದ್ದರಿಂದ, ಕರ್ನಾಟಕ ನಗರ ಸಭೆಗಳ (ಜಾಹೀರಾತುಗಳು) ಮಾದರಿ ಬೈಲಾಗಳು ಅಧಿನಿಯಮ-1966 (Karnataka Municipalities (Advertisements) (Model) Bye-laws Act-1966) ರಂತೆ ಕ್ರಮ ವಹಿಸಲು ಸೂಚಿಸಲಾಯಿತು.

6. ಆಯುಕ್ತರು, ನಗರ ಸಭೆ ರಾಮನಗರ ಇವರು ನಗರ ಸಭೆಯ ಕೌನ್ಸಿಲ್ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಕರಡು ಬೈಲಾಗಳನ್ನು ರಚಿಸಿ, ಸಾರ್ವಜನಿಕ ಪ್ರಕಟಣೆಗೆ ಕೊಡಬೇಕಾಗುತ್ತದೆ. ಸಾರ್ವಜನಿಕರಿಮದ ಆಕ್ಷೇಪಣೆಗಳು ಅಥವಾ ಸೂಚನೆಗಳನ್ನು ಆಹ್ವಾನಿಸಿ ಅದರಂತೆ ತಿದ್ದುಪಡಿಗಳು ಏನಾದರೂ ಇದ್ದಲ್ಲಿ ಅವುಗಳನ್ನು ಅಳವಡಿಸಿಕೊಂಡು, ಅಂತಿಮ ಅಧಿಸೂಚನೆ ಹೊರಡಿಸಲು ಪುನಃ ಸಭೆಯ ಮುಂದೆ ಮಂಡಿಸಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಪಡಿಸುವ ಕ್ರಮವನ್ನು ತೆಗೆದುಕೊಂಡಿದ್ದಾರೆ. ನಂತರ ನಿರಂತರವಾಗಿ ಫ್ಲೆಕ್ಸ್ ಮತ್ತು ಬ್ಯಾನರ್ ತೆರವುಗೊಳಿಸುವ ಕಾರ್ಯಾಚರಣೆ ಹಮ್ಮಿಕೊಳ್ಳಲಾಗುತ್ತಿದೆ ಅಂತ ತಿಳಿಸಿದ್ದಾರೆ.

7. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರ ನಗರ ಸಭೆಯಲ್ಲಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸಲು ನಿಯಮಾವಳಿಗಳು ಇರಲಿಲ್ಲವಾದ ಕಾರಣ, ನಿಯಮಾವಳಿಗಳನ್ನು ರೂಪಿಸಲು ಕಾನೂನಿನಂತೆ ಕ್ರಮವನ್ನು ವಹಿಸಲಾಗಿದೆ. ರಾಜ್ಯ ಪತ್ರದಲ್ಲಿ ನಿಯಮಾವಳಿಗಳನ್ನು ಪ್ರಕಟಿಸಲಾಗಿದೆ ಅಂತ ತಿಳಿಸಿದ ನಂತರ, ರಾಜ್ಯ ಎಲ್ಲಾ ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆಗಳಲ್ಲಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳ ಅಳವಡಿಕೆಯ ಬಗ್ಗೆ ಬೈಲಾಗಲನ್ನು ರೂಚಿಸಲಾಗಿದೆಯೇ ಎನ್ನುವ ಪ್ರಶ್ನೆ ಉದ್ಭವಿಸಿತ್ತು. ಯಾವುದೇ ಬೈಲಾಗಳು

ಇಲ್ಲದೇ ಇಷ್ಟು ವರ್ಷಗಳವರೆಗೆ ಹೇಗೆ ಕಾರ್ಯನಿರ್ವಹಣೆ ಆಗಿತ್ತು? ಅಂತ ಸಹ ಅಂಶಗಳು ಪರಿಗಣನೆಗೆ ಬಂದವು.

೮. ಫ್ಲೆಕ್ಸ್, ಬ್ಯಾನರ್ ಮತ್ತು ಹೊರ್ಡಿಂಗ್ಸ್‌ಗಳ ತೆರವು ಕಾರ್ಯಾಚರಣೆ ನಿರಂತರವಾಗಿ ಆಗಬೇಕಾದ ಪ್ರಕ್ರಿಯೆ ಆಗಿರುವುದರಿಂದ, ರಾಮನಗರ ಜಿಲ್ಲೆಯಲ್ಲಿ ಪ್ರಸ್ತುತ ರೂಪಿಸಿರುವ ನಿಯಮಾವಳಿಗಳ ಪ್ರಕಾರ ಜಾಹೀರಾತುಗಳು, ಫ್ಲೆಕ್ಸ್‌ಗಳು, ಹೊರ್ಡಿಂಗ್ಸ್‌ಗಳು ಮತ್ತು ಬ್ಯಾನರ್‌ಗಳು, ಕಾನೂನುಬಾಹೀರವಾಗಿ ಹಾಕಿದ್ದಲ್ಲಿ ನಿಯಮಾವಳಿಗಳಂತೆ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆಗಳಲ್ಲಿ Karnataka Municipalities (Advertisements) (Model) Bye-laws Act-1966 ರ ಪ್ರಕಾರ ನಿಯಮಾವಳಿಗಳನ್ನು ರೂಪಿಸಿ ಸಾರ್ವಜನಿಕ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರೆದು ಅದರಂತೆ ಮಾಡಲಾದ ನಿಯಮಾವಳಿಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟಣೆಗೊಳಿಸಿ ಫ್ಲೆಕ್ಸ್ ಮತ್ತು ಬ್ಯಾನರ್ ಜಾಹೀರಾತುಗಳ ಹಾವಳಿಯನ್ನು ತಡೆಗಟ್ಟಲು ಕ್ರಮ ವಹಿಸುವಂತೆ, ಫ್ಲೆಕ್ಸ್‌ಗಳು, ಹೊರ್ಡಿಂಗ್ಸ್‌ಗಳು ಮತ್ತು ಬ್ಯಾನರ್‌ಗಳು, ಶುಲ್ಕಗಳನ್ನು ನಿಗದಿಪಡಿಸಿ ಎಲ್ಲಾ ಸಂಬಂಧಪಟ್ಟ ಮಹಾನಗರ ಪಾಲಿಕೆಗಳು, ನಗರ ಸಭೆಗಳು ಮತ್ತು ಪುರಸಭೆಗಳಿಗೆ ನಿರ್ದೇಶನಕೊಡುವಂತೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ರ ಅಡಿಯಲ್ಲಿ ಎದುರುದಾರರ ಶಿಸ್ತುಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡಲಾಗಿದೆ.

೯. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/2/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ